## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 35/2024

**ಸಾಕ್ಷಿಯನ್ನು ದಿಃ 03.11.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಜಯಂತಿ | ಸಿಡಬ್ಲ್ಯೂಃ 8 | ಪಿಡಬ್ಲ್ಯೂಃ 5 |
| ಗಂಡನ ಹೆಸರು | ನಾಣಯ್ಯ | | |
| ವಯಸ್ಸು | 58 ವರ್ಷ | | |
| ಕೆಲಸ | ಅಬಕಾರಿ ಉಪ ನಿರೀಕ್ಷಕಿ | | |
| ವಾಸಸ್ಥಳ | ಹುಣಸೂರು. | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ನಾನು ಮಾರ್ಚ್ 2023 ರಿಂದ ಇಲ್ಲಿಯವರೆಗೆ ಹುಣಸೂರು ಅಬಕಾರಿ ವಲಯದಲ್ಲಿ ಅಬಕಾರಿ ಉಪ ನಿರೀಕ್ಷಕಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ದಿಃ 02.05.2023 ರಂದು ಈ ಪ್ರಕರಣದ ಕಡತವನ್ನು ಚಾಸಾ-5 ರವರಿಂದ ಪಡೆದು ಮುಂದಿನ ತನಿಖೆಗಾಗಿ ಕಡತವನ್ನು ಪರಿಶೀಲಿಸಿರುತ್ತೇನೆ. ಸದರಿ ಕಡತದೊಂದಿಗೆ ಮುದ್ದೆಮಾಲು ಹಾಗೂ ಜಪ್ತು ಪಡಿಸಿಕೊಂಡ ವಾಹನವನ್ನು ಸ್ವೀಕರಿಸಿರುತ್ತೇನೆ. ದಿಃ 06.05.2023 ರಂದು ಮಾದರಿಗಾಗಿ ತೆಗೆದ ಮುದ್ದೆಮಾಲನ್ನು ರಾಸಾಯನಿಕ ವಿಶ್ಲೇಷಣಾ ವರದಿ ನೀಡುವಂತೆ ಕೋರಿ, ಮನವಿ ಪತ್ರ, FIR ಮತ್ತು ಮಹಜರಿನೊಂದಿಗೆ ಚಾಸಾ-3 ರವರು ಮೂಲಕ ರಾಸಾಯನಿಕ ಪ್ರಯೋಗಾಲಯ ಬೆಂಗಳೂರಿಗೆ ಕಳುಹಿಸಿಕೊಟ್ಟಿದ್ದೇನೆ. ದಿಃ 15.05.2023 ರಂದು ಪ್ರಕರಣದಲ್ಲಿ ಜಪ್ತುಪಡಿಸಿದ ವಾಹನ ಸಂಃ ಕೆ.ಎ. 45- ಹೆಚ್ - 8410 ದ್ವಿಚಕ್ರ ವಾಹನದ B Extract ಕೋರಿ RTO ಹುಣಸೂರು ರವರಿಗೆ ಮನವಿ ಸಲ್ಲಿಸಿರುತ್ತೇನೆ. ದಿಃ 16.05.2023 ರಂದು ARTO ಹುಣಸೂರು ರವರು ಜಪ್ತು ಪಡಿಸಿದ ವಾಹನದ B extract ನೀಡಿದ್ದು, ಅದನ್ನು ಪರಿಶೀಲಿಸಲಾಗಿ ಸದರಿ ವಾಹನ ಚಾಸಾ-7ರವರ ಹೆಸರಿನಲ್ಲಿ ಇರುವುದು ಕಂಡು ಬಂತು. ಅದೇ ದಿನದಂದು ಚಾಸಾ-7 ರವರಿಗೆ ನೋಟಿಸ್ ಜಾರಿ ಮಾಡಲು ಸದರಿ ವಿಳಾಸಕ್ಕೆ ಹೋಗಿ ನೋಡಲಾಗಿ ಅವರು ನಮಗೆ

ಸಿಗಲಿಲ್ಲ. ದಿಃ 15.07.2023 ರಂದು ಆರೋಪಿ ಖುದ್ದು ಕಚೇರಿಗೆ ಹಾಜರಾಗಿ ನನ್ನ ಮುಂದೆ ಸ್ವ ಇಚ್ಛಾ ಹೇಳಿಕೆಯನ್ನು ನೀಡಿದ್ದೇನೆ. ದಿಃ 07.06.2023ರಂದು ಚಾಸಾ-1 ಮತ್ತು 2 ರವರ ಹೇಳಿಕೆಗಳನ್ನು ಪಡೆದುಕೊಂಡಿದ್ದೇನೆ. ದಿಃ 08.06.2023 ರಂದು ಪ್ರಕರಣದ ಸಮಯದಲ್ಲಿ ಹಾಜರಿದ್ದ ಇಲಾಖಾ ಸಿಬ್ಬಂದಿಗಳಾದ ಚಾಸಾ-3 ಮತ್ತು 4 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿದ್ದೇನೆ. ದಿಃ 21.07.2023 ರಂದು ಚಾಸಾ-7 ರವರಿಗೆ ನೋಟೀಸ್ ನೀಡಿರುತ್ತೇನೆ. ದಿಃ 28.07.2023 ರಂದು ಚಾಸಾ-7 ರವರು ನನ್ನ ಮುಂದೆ ಹಾಜರಾಗಿ, ಆರೋಪಿಯು ಪರಿಚಯಸ್ಥರಾಗಿದ್ದು, ತನ್ನ ಸ್ವಂತ ಗ್ರಾಮವಾದ ಮೈಲಾಂಬೂರಿಗೆ ತೆರಳಲು ಬಸ್ ಇಲ್ಲದ ಕಾರಣ ತುರ್ತು ನಿಮಿತ್ತ ಮೈಲಾಂಬೂರು ಗ್ರಾಮಕ್ಕೆ ಹೋಗಲು ತಮ್ಮ ವಾಹನವನ್ನು ಪಡೆದುಕೊಂಡು ಹೋಗಿದ್ದಾಗಿ ತಿಳಿಸಿದರು. ದಿಃ23.08.2023 ರಂದು ಚಾಸಾ-3 ರವರು ರಾಸಾಯನಿಕ ಪ್ರಯೋಗಲಾಯ ಬೆಂಗಳೂರಿಗೆ ತೆರಳಿ FSL ವರದಿಯನ್ನು ಪಡೆದು ನನ್ನ ಮುಂದೆ ಹಾಜರುಪಡಿಸಿದರು. ತನಿಖೆಯ ಸಮಯದಲ್ಲಿ ಜಪ್ತುಪಡಿಸಿಕೊಂಡ ವಾಹನದ ಬಾವಚಿತ್ರವನ್ನು ತೆಗೆಸಿರುತ್ತೇನೆ. ಅದಕ್ಕೆ ಸಂಬಂಧಿಸಿದ ಬಾವಚಿತ್ರ ಮತ್ತು ಸಿ.ಡಿಯನ್ನು ಹಾಗೂ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ರಡಿಯಲ್ಲಿ ದೃಢೀಕರಣವನ್ನು ಪಡೆದುಕೊಂಡಿರುತ್ತೇನೆ. ತನಿಖೆಯನ್ನು ಪೂರ್ಣಗೊಳಿಸಿ ದಿಃ 13.12.2023ರಂದು ಆರೋಪಿ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತೇನೆ. ಚಾಸಾ-3 ರವರಿಗೆ ರಾಸಾಯಕನಿಕ ಪ್ರಯೋಗಾಲಯಕ್ಕೆ ಮುದ್ದೆಮಾಲನ್ನು ತೆಗೆದುಕೊಂಡು ಹೋಗಿ ವರದಿಯನ್ನು ತರುವಂತೆ ನೀಡಿದ ಮನವಿಯನ್ನು ಈಗ ನೋಡುತ್ತಿದ್ದು ನಿಪಿ-13 ಎಂದು, ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ದಿಃ 15.05.2023ರಂದು ARTO ಹುಣಸೂರು ರವರಿಗೆ ಸಲ್ಲಿಸಿದ ಮನವಿಯನ್ನು ಈಗ ನೋಡುತ್ತಿದ್ದು ನಿಪಿ-14 ಎಂದು, ಸಾಕ್ಷಿಯ ಸಹಿಯನ್ನು ನಿಪಿ-14(ಎ) ಎಂದು ಗುರುತಿಸಲಾಯಿತು. ವಶಪಡಿಸಿಕೊಂಡ ವಾಹನದ B Extract ಅನ್ನು ಈಗ ನೋಡುತ್ತಿದ್ದು ನಿಪಿ-15 ಎಂದು, ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಯಿತು. ನಿಪಿ-6 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸಿದ್ದು ನಿಪಿ-6(ಎ) ಎಂದು ಗುರುತಿಸಲಾಯಿತು. ನಿಪಿ-11 ಮತ್ತು 12 ರಲ್ಲಿ ಸಾಕ್ಷಿ ತನ್ನ ಸಹಿಗಳನ್ನು ಗುರುತಿಸಿದ್ದು ನಿಪಿ-11(ಎ) ಮತ್ತು 12(ಎ) ಎಂದು ಗುರುತಿಸಲಾಯಿತು.

ಆರೋಪಿ ನನ್ನ ಮುಂದೆ ನೀಡಿದ ಸ್ವ ಇಚ್ಛಾ ಹೇಳಿಕೆಯನ್ನು ಈಗ ನೋಡುತ್ತಿದ್ದು ನಿಪಿ–16 ಎಂದು, ಸಾಕ್ಷಿಯ ಸಹಿಯನ್ನು ನಿಪಿ–16(ಎ) ಎಂದು, ಆರೋಪಿಯ ಸಹಿಯನ್ನು ನಿಪಿ–16(ಬಿ) ಎಂದು ಗುರುತಿಸಲಾಯಿತು. ಕಲಂ 65(ಬಿ) ಅಡಿಯ ಪ್ರಮಾಣ ಪತ್ರವನ್ನು ನೋಡುತ್ತಿದ್ದು, ನಿಪಿ–17 ಎಂದು ಸಾಕ್ಷಿಯ ಸಹಿಯನ್ನು ನಿಪಿ–17(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮು.ಮಾ–1 ಮತ್ತು 2 ನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ. BRL ವಕೀಲರಿಂದಃ**

ಆರೋಪಿ ಹಾಜರಿದ್ದು, ಆರೋಪಿ ಪರ ವಕೀಲರು ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.